# ಅತ್ಯಾಚಾರವೂ, ಪೊಲೀಸ್ ತನಿಖೆಯೂ

> ಕಾಮುಕರ ಕ್ರೌರ್ಯಕ್ಕೆ ಬಲಿಯಾಗಿ ಹತಾಶೆಗೆ ಒಳಗಾಗುವ ಮಹಿಳೆಗೆ ತಕ್ಷಣಕ್ಕೆ ಬೇಕಾಗುವುದು ಸಾಂತ್ವನ. ಠಾಣೆಗಳಲ್ಲಿ ಅಂತಹ ಸಾಂತ್ವನ ನೀಡಿ, ಆಪ್ತ ಸಮಾಲೋಚನೆಯ ಮೂಲಕ ಧೈರ್ಯ ತುಂಬಿ, ಆರೋಪಿಗಳ ವಿರುದ್ಧ ನ್ಯಾಯಬದ್ಧ ಹೋರಾಟಕ್ಕೆ ಅಣಿಗೊಳಿಸುವ ವ್ಯವಸ್ಥೆಯೇ ಇಲ್ಲ.

ಕಳೆದ ವಾರವಿಡೀ ಲೈಂಗಿಕ ದೌರ್ಜನ್ಯಗಳದ್ದೇ ಸುದ್ದಿ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಅತ್ಯಾಚಾರದ ಸಾಕಷ್ಟು ಪ್ರಕರಣಗಳು ವರದಿಯಾಗಿವೆ. ಕೆಲವು ಪ್ರಕರಣಗಳಲ್ಲಿ ಹಾಲುಗಲ್ಲದ ಎಳೆಯ ಕಂದಮ್ಮಗಳ ಮೇಲೆ ಅತ್ಯಾಚಾರ ಮಾಡಲಾಗಿದೆ. ಮನುಷ್ಯತ್ವ ಇರುವ ಯಾರೇ ಆದರೂ ನಾಚಿ ತಲೆತಗ್ಗಿಸಬೇಕಾದ ಘಟನೆಗಳಿವು. ರಾಜ್ಯದಲ್ಲಿ ಅತ್ಯಾಚಾರದ ಎಷ್ಟೊಂದು ಪ್ರಕರಣಗಳು ವರದಿಯಾಗುತ್ತಿವೆಯೆಂದರೆ, ಕಾನೂನು– ಶಿಸ್ತು ಪಾಲಿಸಬೇಕಾದ ಪೊಲೀಸ್ ಇಲಾಖೆಯ ಸಾಮರ್ಥ್ಯವನ್ನೇ ಈ ಘಟನೆಗಳು ಪ್ರಶ್ನಿಸುವಂತಿವೆ. ಪೊಲೀಸ್ ವ್ಯವಸ್ಥೆ ಇರುವುದೇ ಸಮಾಜದಲ್ಲಿ ಕಾನೂನು ಪಾಲನೆಯ ಭಯ ಹುಟ್ಟಿಸಲು. ಆದರೆ ಕ್ರಿಮಿನಲ್‌ಗಳು ಮತ್ತು ಲಂಪಟರಿಗೆ ಪೊಲೀಸರ ಭಯವೇ ಇಲ್ಲದಂತಹ ಸ್ಥಿತಿ ನಮ್ಮಲ್ಲಿ ನಿರ್ಮಾಣವಾಗಿದೆಯೇ? ಕಾನೂನಿನ ಭಯ ಇಲ್ಲದ ಮೇಲೆ ಸಾಮಾನ್ಯ ಜನರನ್ನು ಈ ಕಾಮಾಂಧರಿಂದ ರಕ್ಷಿಸುವವರಾದರೂ ಯಾರು? ಇಂತಹ ಪರಿಸ್ಥಿತಿ ಸಮಾಜದಲ್ಲಿ ಅರಾಜಕ ವಾತಾವರಣಕ್ಕೆ ದಾರಿ ಮಾಡಿಕೊಟ್ಟರೆ, ಸರ್ಕಾರದ ಅವಶ್ಯಕತೆಯಾದರೂ ಏನಿರುತ್ತದೆ? ಅಧಿಕಾರದಲ್ಲಿ ಇರುವವರು ಮಾತ್ರವಲ್ಲ, ಸಮಾಜದ ಎಲ್ಲ ಕ್ಷೇತ್ರಗಳ ಜನರೂ ಒಟ್ಟಿಗೆ ಕುಳಿತು ಯೋಚಿಸಬೇಕಾದ ಪ್ರಶ್ನೆಯಿದು. ಇದು ಕೇವಲ ರಾಜಕೀಯದ ಮಟ್ಟದಲ್ಲಿ ವಾಗ್ವಾದ ನಡೆಸುವ ಅಥವಾ ಟೀವಿ ಚಾನೆಲ್‌ಗಳ ಸ್ವಾರಸ್ಯಕರ ಚರ್ಚೆಯ ವಿಷಯವಾಗಿ ಉಳಿಯಬಾರದು; ಅದಕ್ಕೂ ಮಿಗಿಲಾದ ಗಂಭೀರ ಚರ್ಚೆಯ ಮೂಲಕ ಪರಿಹಾರ ಕ್ರಮಗಳನ್ನು ತುರ್ತಾಗಿ ರೂಪಿಸುವ ಅಗತ್ಯವಿದೆ.

ಪೊಲೀಸ್ ಇಲಾಖೆಯ ಜವಾಬ್ದಾರಿ ಈ ನಿಟ್ಟಿನಲ್ಲಿ ಅತ್ಯಂತ ಹೆಚ್ಚಿನದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಗಂಡಸರಂತೆಯೇ ಹೆಣ್ಣುಮಕ್ಕಳೂ ಯಾವ ಭಯವೂ ಇಲ್ಲದೆ ಹೊರಗೆ ಓಡಾಡುವಂತಹ ವಾತಾವರಣವನ್ನು ಸೃಷ್ಟಿಸುವ ಪ್ರಾಥಮಿಕ ಹೊಣೆಗಾರಿಕೆ ಪೊಲೀಸ್ ಇಲಾಖೆಯದ್ದು. ಕ್ರಿಮಿನಲ್‌ಗಳನ್ನು ಮಟ್ಟಹಾಕುವಲ್ಲಿ ರಾಜಕೀಯ ಹಸ್ತಕ್ಷೇಪ, ಪ್ರಭಾವಿಗಳ ಒತ್ತಡ ಅಡ್ಡಬರುತ್ತಿದೆ ಮುಂತಾಗಿ ಏನೇ ಸಬೂಬುಗಳನ್ನು ಪೊಲೀಸರು ಹೇಳಬಹುದಾದರೂ, ಅವೆಲ್ಲವನ್ನೂ ಮೀರಿ ಕೆಲಸ ಮಾಡಿದ ಪೊಲೀಸ್ ಅಧಿಕಾರಿಗಳನ್ನು ನಮ್ಮ ಸಮಾಜ ಯಾವತ್ತೂ ಬಿಟ್ಟುಕೊಟ್ಟಿಲ್ಲ. ನಾಗರಿಕ ಸಮಾಜವು ಅಂತಹ ಅಧಿಕಾರಿಗಳನ್ನು ಸ್ವಇಚ್ಛೆಯಿಂದ ಗೌರವಿಸಿ, ರಕ್ಷಿಸಿದ ಉದಾಹರಣೆಗಳೂ ಇವೆ.

ಆದರೆ ನಮ್ಮ ಪೊಲೀಸ್ ಇಲಾಖೆ ಇತರೆಲ್ಲ ಸರ್ಕಾರಿ ಇಲಾಖೆಗಳಂತೆಯೇ ಕಾರಕೂನಗಿರಿ ಮಾಡುವ ಇಲಾಖೆಯಾಗಿ ಪರಿವರ್ತನೆಯಾದಂತಿದೆ. ಬೇರೆಡೆಯಂತೆ ಅಲ್ಲೂ ಭ್ರಷ್ಟಾಚಾರದ ಬೆಳೆ ಹುಲುಸಾಗಿದೆ. ಕೆಲವರು ಶುದ್ಧಹಸ್ತರಾಗಿದ್ದರೂ ಒಟ್ಟಾರೆ ಇಡೀ ಇಲಾಖೆಯ ಪ್ರಾಮಾಣಿಕತೆಯ ಬಗ್ಗೆ ಎದೆತಟ್ಟಿ ಹೇಳುವ ಸ್ಥಿತಿ ಇಲ್ಲ. ಅದಕ್ಕಿಂತ ಮುಖ್ಯವಾಗಿ ಸಾರ್ವಜನಿಕರ ಜತೆ ವ್ಯವಹರಿಸುವ ಸಭ್ಯ ಭಾಷೆ ಮತ್ತು ವಿಧಾನಗಳನ್ನೇ ಇಲಾಖೆ ಮರೆತಂತಿದೆ. ರೌಡಿಗಳಿಗೂ, ಜನಸಾಮಾನ್ಯರಿಗೂ ಬಳಸುವ ಭಾಷೆ ಒಂದೇ ಅಲ್ಲ; ಆಗಲೂಬಾರದು. ಕೋಲಾರದಲ್ಲಿ ತನ್ನ ಅಪ್ರಾಪ್ತ ಮಗಳ ಮೇಲೆ ನಡೆದ ಅತ್ಯಾಚಾರದ ಬಗ್ಗೆ ದೂರು ನೀಡಲು ಠಾಣೆಗೆ ಹೋದ ಮಹಿಳೆಯೊಬ್ಬರ ವಿಚಾರಣೆಯ ವರದಿ ಇದಕ್ಕೆ ಇತ್ತೀಚಿನ ಸಾಕ್ಷಿ. ದೂರು ನೀಡುವಂತೆ ಒರಟು ಭಾಷೆಯಲ್ಲಿ ಪೊಲೀಸ್ ಅಧಿಕಾರಿ ಕೇಳುವುದು, ಅತ್ಯಾಚಾರದ ವಿವರಗಳನ್ನು ಮತ್ತೆ ಮತ್ತೆ ಕೆದಕಿ ರೈಟರ್ ಬರೆದುಕೊಳ್ಳುವುದು, ಠಾಣೆಯಲ್ಲಿದ್ದ ಮಹಿಳಾ ಸಿಬ್ಬಂದಿ ಸಂಬಂಧವೇ ಇಲ್ಲದಂತೆ ದೂರ ನಿಂತಿರುವುದು– ಎಲ್ಲವೂ ನಮ್ಮ ಪೊಲೀಸ್ ವ್ಯವಸ್ಥೆಯ ಸಂವೇದನಾಶೂನ್ಯ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಕಾಮುಕರ ದಾಳಿಗೆ ಹೆಣ್ಣು ಬಲಿಯಾದಷ್ಟೇ ಕ್ರೂರ ವಿದ್ಯಮಾನವಿದು. ಮಹಿಳೆಯರನ್ನು ಠಾಣೆಯಲ್ಲಿ ಪುರುಷ ಅಧಿಕಾರಿ ವಿಚಾರಣೆ ಮಾಡುವ ಕ್ರಮವೇ ಅಮಾನವೀಯ. ಅದರಲ್ಲೂ ಕಾಮುಕರ ಕ್ರೌರ್ಯಕ್ಕೆ ಬಲಿಯಾಗಿ ಹತಾಶೆಗೆ ಒಳಗಾಗುವ ಮಹಿಳೆಗೆ ತಕ್ಷಣಕ್ಕೆ ಬೇಕಾಗುವುದು ಸಾಂತ್ವನ. ಠಾಣೆಗಳಲ್ಲಿ ಅಂತಹ ಸಾಂತ್ವನ ನೀಡಿ, ಆಪ್ತ ಸಮಾಲೋಚನೆಯ ಮೂಲಕ ಧೈರ್ಯ ತುಂಬಿ ಆರೋಪಿಗಳ ವಿರುದ್ಧ ನ್ಯಾಯಬದ್ಧ ಹೋರಾಟಕ್ಕೆ ಅಣಿಗೊಳಿಸುವ ವ್ಯವಸ್ಥೆಯೇ ಇಲ್ಲ. ಅದಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೆರವನ್ನು ಪಡೆಯಲು ಅವಕಾಶ ಇದ್ದರೂ ಬಹುತೇಕ ಕಡೆಗಳಲ್ಲಿ ಅದು ನಡೆಯುವುದೇ ಇಲ್ಲ.

ಅತ್ಯಾಚಾರದಂತಹ ಸೂಕ್ಷ್ಮ ಪ್ರಕರಣಗಳಲ್ಲಿ ಪೊಲೀಸರು ಕಟ್ಟುನಿಟ್ಟಾಗಿ ಕೆಲವು ಮಾನವೀಯ ನಡೆಗಳನ್ನು ರೂಪಿಸಿಕೊಳ್ಳಬೇಕಿದೆ. ಇಂತಹ ಪ್ರಕರಣಗಳನ್ನು ನಿಭಾಯಿಸಲೆಂದೇ ಪ್ರತಿ ತಾಲ್ಲೂಕಿನಲ್ಲೂ ಪೂರ್ಣ ಮಹಿಳಾ ಠಾಣೆಗಳನ್ನು ರಚಿಸಬೇಕಿದೆ. ಪುರುಷ ಸಿಬ್ಬಂದಿಯನ್ನು ಸಂವೇದನಾಶೀಲಗೊಳಿಸುವ ತರಬೇತಿಗಳನ್ನು ನಿರಂತರವಾಗಿ ನಡೆಸಬೇಕಿದೆ.



■ ಬಿ.ಎಂ.ಹನೀಫ್